# ಮುನ್ನುಡಿ

ಮಾರ್ಚ್ 2019ಕ್ಕೆ ಅಂತ್ಯಗೊಂಡಿರುವಂತಹ ಸಾಲಿನ ಈ ವರದಿಯನ್ನು ಭಾರತದ ಸಂವಿಧಾನದ ಕಲಮು 151 (2)ರ ಅಡಿಯಲ್ಲಿ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಉದ್ದೇಶದಿಂದ, ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸುವ ಸಲುವಾಗಿ ತಯಾರಿಸಲಾಗಿರುವುದು.

ಈ ವರದಿಯ ಭಾಗ–I 'ಕರ್ನಾಟಕದ ಮೃಗಾಲಯ ಪ್ರಾಧಿಕಾರದಿಂದ ಮೃಗಾಲಯಗಳ ನಿರ್ವಹಣೆ' ಈ ವಿಷಯದ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯ ಹಾಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಲೋಕೋಪಯೋಗಿ, ಬಂದರುಗಳು, ಒಳನಾಡು ಜಲ ಸಾರಿಗೆ ಮತ್ತು ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆಗಳ ಅನುಪಾಲನಾ ಲೆಕ್ಕಪರಿಶೋಧನೆಯ ಗಮನಾರ್ಹವಾದಂತಹ ಫಲಿತಾಂಶಗಳನ್ನು ಒಳಗೊಂಡಿರುತ್ತದೆ.

ಈ ವರದಿಯ ಭಾಗ–II "ಕರ್ನಾಟಕದಲ್ಲಿ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮಗಳ ಅಡಿಯಲ್ಲಿ ಮಧ್ಯಂತರ/ಪರಿವರ್ತನಾ ಕಾಲದ (Transitional) ಅನುವುಗಳನ್ನು ಕಾರ್ಯಗತಗೊಳಿಸಿದ್ದು" ಈ ವಿಷಯದ ಮೇಲಿನ ಒಂದು ಅನುಪಾಲನಾ ಲೆಕ್ಕಪರಿಶೋಧನೆಯ ಹಾಗೂ ವಾಣಿಜ್ಯ ತೆರಿಗೆಗಳ ಇಲಾಖೆ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯನ್ನು ಒಳಗೊಂಡಂತೆ ರಾಜಸ್ವ ವಲಯದ ಅಡಿಯಲ್ಲಿನ ಕರ್ನಾಟಕ ಸರ್ಕಾರದ ಇಲಾಖೆಗಳ ಅನುಪಾಲನಾ ಲೆಕ್ಕಪರಿಶೋಧನೆಗಳ ಗಮನಾರ್ಹವಾದಂತಹ ಫಲಿತಾಂಶಗಳನ್ನು ಒಳಗೊಂಡಿರುತ್ತದೆ.

ಈ ವರದಿಯಲ್ಲಿ ತಿಳಿಸಲಾಗಿರುವಂತಹ ದೃಷ್ಟಾಂತಗಳು 2018–19ರ ಅವಧಿಗೆ ಮಾಡಲಾದಂತಹ ಪರೀಕ್ಷಾ–ಪರಿಶೀಲನೆಯ ಸಮಯದಲ್ಲಿ ಗಮನಿಸಲಾದಂತಹ ಅಂಶಗಳನ್ನು ಅಲ್ಲದೆಯೇ ಹಿಂದಿನ ಸಾಲುಗಳಲ್ಲಿ ಗಮನಿಸಲಾಗಿದ್ದು, ಆದರೆ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದವುಗಳಾಗಿರುತ್ತವೆ. 2018–19ರ ನಂತರದ ಅವಧಿಗೆ ಸಂಬಂಧಿತ ದೃಷ್ಟಾಂತಗಳನ್ನೂ ಸಹ ಎಲ್ಲೆಲ್ಲಿ ಅಗತ್ಯವಿರುವುದಾಗಿ ಕಂಡು ಬಂದಿರುವುದೋ ಅಂತಹ ಕಡೆಗಳಲ್ಲಿ ಸೇರಿಸಲಾಗಿರುವುದು.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಂತಹ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿರುವುದು.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸತಕ್ಕದ್ದು.